
ಓಂ ನಮಃ

## ಧಾರ್ಮಿಕ ಲೇಖನ ಸಂಗ್ರಹ



# ಸದ್ಧರ್ಮಾಮೃತ

ಲೇಖಕರು : ಸಿ. ರಾಮಚಂದ್ರ, ಸ್ಯಾದ್ವಾದಿ, ತುಮಕೂರು

ಪ್ರಕಾಶಕರು

ಶ್ರೀಮತಿ ಜಯಪದ್ಮ ಅ. ನಾ. ಚಂದ್ರ ಕೀರ್ತಿ

ರತ್ನತ್ರಯ ಪ್ರಕಾಶನ, 713 ಚಿತ್ರಭಾನು ರಸ್ತೆ, ಕುವೆಂಪುನಗರ, ಮೈಸೂರು- 23

ಓಂ ನಮಃ

# ಸದ್ಧರ್ಮಾಮೃತ

(ಧಾರ್ಮಿಕ ಲೇಖನ ಸಂಗ್ರಹ)

ಲೇಖಕರು:

ಸಿ. ರಾಮಚಂದ್ರ ಸ್ಯಾದ್ವಾದಿ

ತುಮಕೂರು

ಪ್ರಕಾಶಕರು:

ಶ್ರೀಮತಿ ಜಯಪದ್ಮ ಅ.ನಾ.ಚಂದ್ರಕೀರ್ತಿ

ರತ್ನತ್ರಯ ಪ್ರಕಾಶನ, 713, ಚಿತ್ರಭಾನು ರಸ್ತೆ,

ಕುವೆಂಪುನಗರ, ಮೈಸೂರು – 23.

2001

**SADDHARAMAMRUTA**
By C. Ramachandra Syadwadi

**Published by :**
Smt. Jayapadma and A.N. Chandrakeerth

**RATNATRAYA PRAKSHANA**
713, Chitrabhanu Road, Kuvempunagar, Mysore - 23.
Phone : 0821 - 541002

ಪ್ರತಿಗಳು - 1000

ಮೊದಲನೇ ಮುದ್ರಣ : 2001


ಬೆಲೆ ರೂ. : 180-00

ಎಲ್ಲಾ ಹಕ್ಕುಗಳುನ್ನು ಕಾದಿರಿಸಲಾಗಿದೆ

ಪುಸ್ತಕಗಳು ದೊರೆಯುವ ಸ್ಥಳ :-
ಶ್ರೀ ಅ. ನಾ. ಚಂದ್ರಕೀರ್ತಿ
ರತ್ನತ್ರಯ ಪ್ರಕಾಶನ
713 , ಚಿತ್ರಭಾನುರಸ್ತೆ, ಕುವೆಂಪುನಗರ, ಮೈಸೂರು - 23.
ಫೋನ್ :- 0821 - 541022

ಮುದ್ರಣ :
ಎ. ಸಿ. ನೇಮಿಚಂದ್ರ ಫ್ಯಾಮಿಲಿ
ಸನ್ಮತಿ ಪ್ರಿಂಟರ್ಸ್
ಎಂ.ಜಿ.ರಸ್ತೆ, ತುಮಕೂರು.
ಫೋನ್ :- 0816 - 273284 , 275861


ಶ್ರೀ ಶಾಂತಿನಾಥ ಸ್ಟೋರ್ಸ್
ಎಂ.ಜಿ.ರಸ್ತೆ, ತುಮಕೂರು.




ಭಗವಾನ್ ೧೦೦೮ ಶ್ರೀ ಮಹಾವೀರ ಸ್ವಾಮಿ

# ಭಗವಾನ್ ೧೦೦೮ ಶ್ರೀ ಮಹಾವೀರಸ್ವಾಮಿ ಪ್ರಣಾಮಗಳು

ಜಂಬೂದ್ವೀಪದ ಭರತಕ್ಷೇತ್ರದ ಆರ್ಯಖಂಡದ ಕುಂಡಲಪುರದಲ್ಲಿ ನಾಥ ವಂಶದ ಸಿದ್ಧಾರ್ಥ ಮಹಾರಾಜನ ಪತ್ನಿ ತ್ರಿಶಲಾದೇವಿ (ಪ್ರಿಯಕಾರಿಣಿ)ಯ ಪವಿತ್ರ ಗರ್ಭದಲ್ಲಿ ಚೈತ್ರಶುದ್ಧ ತ್ರಯೋದಶಿಯಂದು ಇಪ್ಪತ್ತನಾಲ್ಕನೇ ತೀರ್ಥಂಕರರಾಗಿ ಜನಿಸಿ ಎಪ್ಪತ್ತೆರಡು ವರ್ಷ ಆಯುಷ್ಯ ಉಳ್ಳವರಾಗಿ, ಏಳು ಮೊಳ ಎತ್ತರವಿದ್ದವರೂ, ಸಿಂಹ ಲಾಂಛನ ಹೊಂದಿದ್ದವರೂ, ವಜ್ರವೃಷಭ ನಾರಾಚ ಸಿಂಹ ನನದ ಪರಮೌದಾರಿಕ ದಿವ್ಯ ದೇಹಧಾರಿಯಾಗಿದ್ದು ಬಾಲಬ್ರಹ್ಮಚಾರಿಗಳಾಗಿದ್ದು ಮೂವತ್ತು ವರ್ಷದವರೆಗೂ ಯುವರಾಜರಾಗಿದ್ದು ಸಹಜವಾದ ವೈರಾಗ್ಯದಿಂದ ಸಂಸಾರ ಶರೀರ ಭೋಗಗಳನ್ನು ಧಿಕ್ಕರಿಸಿ ಸ್ವಪರ ಕಲ್ಯಾಣಾರ್ಥ ತಪೋವನಕ್ಕೆ ತೆರಳಿ ದಿಗಂಬರ ದೀಕ್ಷಾಧಾರಿಗಳಾಗಿ ಘೋರವಾದ ಉಪಸರ್ಗವನ್ನು ಸಹಿಸಿ ಹನ್ನೆರಡು ವರ್ಷ ಪರ್ಯಂತ ಕಠಿಣ ತಪಸ್ಸನ್ನು ಮಾಡಿ ಘಾತೀಯ ಕರ್ಮಗಳನ್ನು ಗೆದ್ದು ಅರಿಹಂತ ಜಿನರಾಗಿ ಅನಂತ ಚತುಷ್ಟಯಗಳನ್ನು ಹೊಂದಿ ನಿರ್ದೋಷರೂ ವೀತರಾಗಿಗಳೂ ಸರ್ವಜ್ಞರೂ ಹಿತೋಪದೇಶಿಗಳಾಗಿ ಸಮವಸರಣದಲ್ಲಿ ವಿರಾಜಮಾನನಾಗಿ ಅಷ್ಟ ಮಹಾಪ್ರಾತಿಹಾರ್ಯ ಸುಶೋಭಿತರಾಗಿ ಶ್ರೀ ಗೌತಮರೇ ಮೊದಲಾದ ಹನ್ನೊಂದು ಮಂದಿ ಗುಣಧರರ ಸಹಿತ ದ್ವಾದಶಗಣ ಪರಿಪೂರಿತರಾಗಿ ಸಕಲ ಕಲ್ಯಾಣ ಗುಣಾಭಿರಾಮರಾಗಿ ಶ್ರೀ ಮಾತಂಗಯಕ್ಷ ಶ್ರೀ ಸಿದ್ಧಾಯಿನೀ ಯಕ್ಷಿಯರ ಸಹಿತರಾಗಿ ವಿಹಾರ ಮಾಡಿ, ಧರ್ಮೋಪದೇಶಗೈದು ಕೊನೆಗೆ ಪಾವಾಪುರದ ಕೆರೆಯ ಮಧ್ಯದ ಶಿಲಾ ಫಲಕದ ಮೇಲೆ ನಿಂತು ಸಕಲಕರ್ಮಕ್ಷಯ ಮಾಡಿ ನಿರ್ವಾಣ ಹೊಂದಿ ಪರಮ ನಿರಂಜನ ಸಿದ್ಧರಾದ ಭಗವಾನ್ ೧೦೦೮ ಶ್ರೀ ವರ್ಧಮಾನ ಮಹಾವೀರ ಸ್ವಾಮಿಯವರ ಪಾದಾರವಿಂದಗಳಿಗೆ ಭಕ್ತಿಪೂರ್ವಕ ಅನಂತಾನಂತ ಪ್ರಣಾಮಗಳು.



6-4-2001ನೇ ಶುಕ್ರವಾರ ವಿಶ್ವದಾದ್ಯಂತ ಬಹುವಿಜೃಂಭಣೆಯಿಂದ ಆಚರಿಸುವ ಭಗವಾನ್ ಶ್ರೀ ಮಹಾವೀರ ಸ್ವಾಮಿಯವರ 2600ನೇ ಜಯಂತಿಯ ಶುಭ ಸಂದರ್ಭದ ಸ್ಮರಣಾರ್ಥ ಈ ಸದ್ಧರ್ಮಾಮೃತ ಗ್ರಂಥವನ್ನು ಧರ್ಮ ಮತ್ತು ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಅಪೂರ್ವ ಕಾಣಿಕೆ.



ಓಂ ನಮಃ

## ಪರಮಪೂಜ್ಯ ಸ್ವಸ್ತಿಶ್ರೀ ಶ್ರೀ ಭಟ್ಟಾರಕ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮೀಜಿ ಅವರು

ಶ್ರೀ ಜೈನಮಠ, ಶ್ರೀಕ್ಷೇತ್ರ, ಮೂಡುಬಿದ್ರಿ, ದ.ಕ॥

## ಶುಭ ಸಂದೇಶ

ಸದ್ಧರ್ಮಾನುರಾಗಿ ಶ್ರೀ ಸಿ. ರಾಮಚಂದ್ರ ಸ್ಯಾದ್ವಾದಿಯವರಿಗೆ ಶುಭಾಶೀರ್ವಾದಗಳು.

ಸದ್ಧರ್ಮ ವತ್ಸಲರಾದ ನೀವು "ಸದ್ಧರ್ಮಾಮೃತ" ಎಂಬ ಅಮೂಲ್ಯ ಗ್ರಂಥವೊಂದನ್ನು ಪ್ರಕಟಿಸಲಿರುವ ವಿಚಾರ ತಿಳಿದು ತುಂಬಾ ಸಂತೋಷವಾಯಿತು. ಈ ಗ್ರಂಥದಲ್ಲಿ ನೀವು ಪ್ರಕಟಿಸಲಿರುವ ವೈವಿಧ್ಯಮಯ ಧಾರ್ಮಿಕ ವಿಚಾರಗಳನ್ನೊಳಗೊಂಡ ಲೇಖನಗಳನ್ನು ಗಮನಿಸಿದಾಗ ಇಂತಹದ್ದೊಂದು ಶ್ರೇಷ್ಠ ಉದ್ಗ್ರಂಥವೊಂದನ್ನು ಪಡೆಯುವುದು ಸಮಾಜದ ಭಾಗ್ಯವೆಂದು ಭಾವಿಸುತ್ತೇವೆ.

ವಿಸ್ತಾರವಾದ ಅಧ್ಯಯನದಿಂದ ಪ್ರಕಾಂಡ ಪಾಂಡಿತ್ಯವನ್ನು ಸಂಪಾದಿಸಿರುವ ನೀವು ಶ್ರೇಷ್ಠವಾಗ್ಮಿಯಾಗಿ ಅತ್ಯುತ್ತಮವಾದ ಲೇಖಕರಾಗಿ ನಿಮ್ಮ ಅನುಭವಾಮೃತವನ್ನು ಹಲವು ಸಂವತ್ಸರಗಳಿಂದ ಸಮಾಜಕ್ಕೆ ಸಮರ್ಪಿಸುತ್ತಾ ಬಂದಿದ್ದೀರಿ. ಆ ಮೂಲಕ ಸಮಾಜಕ್ಕೆ ನಿಮ್ಮ ಸೇವೆ ಅಪೂರ್ವ,ಅವಿಸ್ಮರಣೀಯ, ವಿಶೇಷವಾಗಿ ನಮ್ಮ ಶ್ರೀ ಮಠದ ಮುಖವಾಣಿಯಾಗಿರುವ "ವಿವೇಕಾಭ್ಯುದಯ" ಪತ್ರಿಕೆಯನ್ನು ನಿಮ್ಮ ಶ್ರೇಷ್ಠ ಲೇಖನಗಳಿಂದ ಶ್ರೀಮಂತಗೊಳಿಸಿದ ಕೆಲವೇ ಲೇಖಕರಲ್ಲಿ ನೀವು ಪ್ರಮುಖರೆಂದರೆ ತಪ್ಪಾಗಲಾರದು, ನಿಮ್ಮ ಅತ್ಯುತ್ತಮ ಬರಹಗಳು "ವಿವೇಕಾಭ್ಯುದಯಕ್ಕೆ" ವಿಶೇಷ ಘನತೆ ಮಾನ್ಯತೆಗಳನ್ನು ಒದಗಿಸಿವೆ. ಧರ್ಮದ ಕುರಿತು ನಿರಂತರ ಅಧ್ಯಯನಶೀಲರಾಗಿರುವ ನೀವು ನಮ್ಮ ವಿವೇಕಾಭ್ಯುದಯವೇ ಮೊದಲಾದ ಪತ್ರಿಕೆಗಳಲ್ಲಿ ಬರೆದಿರುವ ಲೇಖನಗಳು ಅತ್ಯಂತ ಸತ್ವಪೂರ್ಣವಾಗಿವೆ ಎಂಬುದನ್ನು ನಾವು ಓದಿ ತಿಳಿದಿದ್ದೇವೆ. ಓದುಗರನ್ನೂ ಚಿಂತನಶೀಲರನ್ನಾಗಿ ಮಾಡಿ, ಸದ್ಧರ್ಮ ಮಾರ್ಗದಲ್ಲಿ ಪ್ರೇರೇಪಿಸುತ್ತಿರುವ ಲೇಖನಗಳು ಇದೀಗ ಒಂದೇ ಗ್ರಂಥದಲ್ಲಿ ಸುಲಭವಾಗಿ ಲಭ್ಯವಾಗುವಂತೆ ಮಾಡುತ್ತಿರುವುದು ತುಂಬಾ ಸ್ತುತ್ಯವಾದ ಕಾರ್ಯ.

ಜೈನ ಧಾರ್ಮಿಕ ಕ್ಷೇತ್ರದಲ್ಲಿ ಅನಾದೃಶ್ಯವಾದ ಸಾಧನೆ ಮಾಡಿರುವ ನಿಮ್ಮ ಪ್ರಯತ್ನ ಸಿದ್ಧಿಗಳನ್ನು ಆತ್ಮೀಯವಾಗಿ ಅಭಿನಂದಿಸುತ್ತಿದ್ದೇವೆ. ಭವ್ಯಾತ್ಮರಾದ ನೀವು ನಿಮ್ಮ ಈ ಸತ್ಕಾರ್ಯದಲ್ಲಿ ನಿರಂತರವಾಗಿ ಮುನ್ನಡೆಯಿರೆಂದು ಹಾರ್ದಿಕವಾಗಿ ಆಶೀರ್ವದಿಸುತ್ತಿದ್ದೇವೆ.

ನಿಮ್ಮ ಈ ಸದ್ಧರ್ಮಾಮೃತ ಗ್ರಂಥವನ್ನು ನಮ್ಮ ಈ ಗುರುಪೀಠಕ್ಕೆ ಸಮರ್ಪಿಸುತ್ತಿರುವ ವಿಚಾರ ತಿಳಿದು ಹರ್ಷವಾಯಿತು. ಈ ಉತ್ತಮವಾದ ಗ್ರಂಥವನ್ನು ಪ್ರಕಾಶನಗೊಳಿಸಿರುವ ಧರ್ಮ ಪ್ರಭಾವನಾ ತತ್ಪರರಾದ ಶ್ರೀ ಅ.ನಾ. ಚಂದ್ರಕೀರ್ತಿಯವರು ನಿಜವಾಗಿಯೂ ಧನ್ಯರು. ಒಳ್ಳೆಯ ಕಾರ್ಯವನ್ನು ಮಾಡಿದ್ದಾರೆ.

ಈ ಗ್ರಂಥ ಲೇಖಕರಿಗೂ, ಪ್ರಕಾಶಕರಿಗೂ, ದೇವ–ಗುರು–ಶಾಸ್ತ್ರಗಳೂ ಸದಾ ಶುಭವನ್ನುಂಟು ಮಾಡಲಿ ಎಂದು ಶ್ರೀ ಕ್ಷೇತ್ರದ ಶ್ರೀ ಚಿಂತಾಮಣಿ ಪಾರ್ಶ್ವನಾಥ ಸ್ವಾಮಿಯವರಲ್ಲೂ ಮತ್ತು ಮಹಾಮಾತೆ ಶ್ರೀ ಕೂಷ್ಮಾಂಡಿನೀ ದೇವಿಯವರಲ್ಲಿಯೂ ಪ್ರಾರ್ಥಿಸಿ ಹರಸಿ ಆಶೀರ್ವದಿಸುತ್ತಿದ್ದೇವೆ.

''ಭದ್ರಂ ಭೂಯಾತ್, ವರ್ಧತಾಂ ಜಿನ ಶಾಸನಮ್.''

ಇತೀ ಶುಭಾಶೀರ್ವಾದಗಳೊಂದಿಗೆ

(ಸಹಿ)
ಸ್ವಸ್ತಿಶ್ರೀ ಶ್ರೀ ಭಟ್ಟಾರಕ ಚಾರುಕೀರ್ತಿ ಪಂಡಿತಾಚಾರ್ಯ ಸ್ವಾಮೀಜಿ,
ಜೈನಮಠ, ಮೂಡುಬಿದ್ರಿ, ದ.ಕ.

# ಶ್ರೀ ಗುಟ್ಟೆ ಬ್ರಹ್ಮದೇವರು

ಅತಿಶಯ ಕ್ಷೇತ್ರ, ಗುಂಡ್ಲಹಳ್ಳಿ
ಗೌರಿಬಿದನೂರು ತಾಲ್ಲೂಕು, ಕೋಲಾರ ಜಿಲ್ಲೆ

ಶ್ರೀ ಬ್ರಹ್ಮದೇವರು ನೆಲೆಸಿರುವ ಈ ಗುಟ್ಟೆಯು ಬಹು ಪ್ರಾಚೀನವೂ, ಅದ ಅತಿಶಯ ಕ್ಷೇತ್ರವಾಗಿದೆ. ಗುಂಡ್ಲಹಳ್ಳಿಯ ಸಮೀಪದಲ್ಲಿ ಒಂದು ಚಿಕ್ಕ ಬೆಟ್ಟವಿದೆ. ಇದಕ್ಕೆ ಗುಟ್ಟೆ ಎನ್ನುತ್ತಾರೆ. ಈ ಗುಟ್ಟೆಯ ಮೇಲೆ ಶ್ರೀ ಬ್ರಹ್ಮಯಕ್ಷದೇವರ ಕ್ಷೇತ್ರವೆಂದೇ ಪ್ರಸಿದ್ಧವಾಯಿತು. ಬ್ರಹ್ಮದೇವರು ಹತ್ತನೇ ತೀರ್ಥಂಕರರಾದ ಭಗವಾನ್ ಶ್ರೀ ಶೀತಲನಾಥ ಸ್ವಾಮಿಯ ಯಕ್ಷರಾಗಿದ್ದಾರೆ. ಈ ಕ್ಷೇತ್ರವು ಅತಿ ರಮಣೀಯವಾದ ಪ್ರಕೃತಿ ಸೌಂದರ್ಯದ ಮಡಿಲಿನಲ್ಲಿದೆ. ಪ್ರಶಾಂತವಾದ ವಾತಾವರಣವಿದೆ.


ಶ್ರೀ ಬ್ರಹ್ಮದೇವರ ಮಂದಿರದ ಮೇಲೆ ಇರುವ ಬಂಡೆಯ ಮೇಲೆ ಒಂದು ಮಂದಿರ ಕಟ್ಟಿ ಅಲ್ಲಿ ಶ್ರೀ ಶೀತಲನಾಥ ಸ್ವಾಮಿಯ ಮೂರ್ತಿಯನ್ನು ಸ್ಥಾಪಿಸುವ ಪ್ರಯತ್ನ ನಡೆದಿದೆ. ಕಾರ್ಯಪ್ರಗತಿಯಲ್ಲಿದೆ, ಮಂದಿರದ ಎದುರಿಗೆ ಒಂದು ಮಾನ ಸ್ಥಂಬವಿದೆ. ಪಕ್ಕದಲ್ಲಿ ಒಂದು ಮಂಟಪವೂ ಇದೆ. ವಿಶಾಲವಾದ ಪ್ರಾಂಗಣವೂ ಇದೆ. ಬೆಟ್ಟದ ಮಧ್ಯೆ ಒಂದು ದೊಣೆ ಇದೆ. ಇದರಲ್ಲಿ ಸದಾ ನೀರು ಇರುತ್ತದೆ.

ಶ್ರೀ ಗುಟ್ಟೆ ಬ್ರಹ್ಮದೇವರನ್ನು ಮನೆದೇವರಾಗಿ ನಂಬಿ ಆರಾಧಿಸುವ ಭಕ್ತಾದಿಗಳು ಅಪಾರವಾಗಿದ್ದಾರೆ. ಬೆಂಗಳೂರು, ಮೈಸೂರು, ತುಮಕೂರು, ಹಿಂದೂಪುರ, ಗೌರಿಬಿದನೂರು, ಅದಲಗೆರೆ, ರತ್ನಗಿರಿ, ತೊಂಡೆಬಾವಿ, ಶಿವಮೊಗ್ಗ, ತೋವಿನಕೆರೆ ಮುಂತಾದ ಸ್ಥಳಗಳಿಂದ ಭಕ್ತಾದಿಗಳು ಇಲ್ಲಿಗೆ ಆಗಾಗ ಬಂದು ಪೂಜೆ ಸಲ್ಲಿಸುತ್ತಾರೆ. ಈ ಗ್ರಂಥದ ಪ್ರಕಾಶಕರಿಗೂ ಇದು ಮನೆ ದೇವರಾಗಿದೆ.

ಇಲ್ಲಿ ಪ್ರತಿ ವರ್ಷವೂ ವಾರ್ಷಿಕಪೂಜೆ ನಡೆಯುತ್ತದೆ. ಆಗ ಭಗವಾನ್ ಶ್ರೀ ಶೀತಲನಾಥ ಸ್ವಾಮಿಗೆ ಮತ್ತು ಶ್ರೀ ಬ್ರಹ್ಮದೇವರಿಗೆ ಮಹಾಭಿಷೇಕದ ವಿಶೇಷ ಪೂಜಾರಾಧನೆ ಆಗುತ್ತದೆ. ಧಾರ್ಮಿಕ ಉಪನ್ಯಾಸ ಕಾರ್ಯಕ್ರಮವೂ ಇರುತ್ತದೆ. ಅಪೂರ್ವ ಧರ್ಮ ಪ್ರಭಾವನೆಯಾಗುತ್ತದೆ.


ಈ ಕ್ಷೇತ್ರದ ಸುತ್ತಮುತ್ತ ಹಲವಾರು ಅತಿಶಯ ಕ್ಷೇತ್ರಗಳಿವೆ. ಮಂಚೇನ ಹಳ್ಳಿಯ ಕೋಡಿಬ್ರಹ್ಮದೇವರು, ನಾಮಗೊಂಡ್ಲು, ಕಡಬೂರು ಪ್ರಸಿದ್ಧವಾಗಿದೆ.

ಮಂಚೇನಹಳ್ಳಿಯಲ್ಲಿ ಕೋಡಿಬ್ರಹ್ಮದೇವರ ವಾರ್ಷಿಕ ಪೂಜೆ ಧರ್ಮ ಪ್ರಭಾವನೆ ಆಗುತ್ತದೆ. ಶೀತಲನಾಥಸ್ವಾಮಿ ಮಂದಿರ ಇದೆ. ಕ್ಷೇತ್ರೋದ್ಧಾರ ಕಾರ್ಯ ಪ್ರಗತಿಯಲ್ಲಿವೆ.



ಶ್ರೀ ಗುಟ್ಟೆ ಬ್ರಹ್ಮದೇವರು, ಗುಂಡ್ಲಹಳ್ಳಿ, ಗೌರಿಬಿದನೂರು ತಾ।

# ಗ್ರಂಥ ಸಮರ್ಪಣೆ



ಶ್ರೀ ಕ್ಷೇತ್ರ ಮೂಡುಬಿದ್ರಿ, ಜೈನಮಠದ
ಭಟ್ಟಾರಕ ಪಟ್ಟಾಚಾರ್ಯರಾದ ಪರಮಪೂಜ್ಯ ಸ್ವಸ್ತಿಶ್ರೀ
ಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ
ಮಹಾಸ್ವಾಮೀಜಿ ಅವರ ಕರಕಮಲಗಳಿಗೆ
ಭಕ್ತಿಪೂರ್ವಕವಾಗಿ ಈ ಗ್ರಂಥವನ್ನು
ಸಮರ್ಪಣೆ ಮಾಡಲಾಗಿದೆ.

ಲೇಖಕರು ಮತ್ತು ಪ್ರಕಾಶಕರು

# ಮುನ್ನುಡಿ

ಜೈನ ವಾಙ್ಮಯವು ಬಹು ವಿಶಾಲವಾದುದು. ಅದರಲ್ಲಿ ಎಲ್ಲಾ ಬಗೆಯ ಸಾಹಿತ್ಯ ರಚನೆಯಾಗಿದೆ. ಇವಕ್ಕೆಲ್ಲಾ ಜಿನವಾಣಿಯೇ ಆಧಾರವಾಗಿದೆ.

ಜಿನವಾಣಿಯಲ್ಲಿ ಜೈನಧರ್ಮದ ಸಕಲ ವಿಷಯದ ವಿಸ್ತೃತವಾದ ವಿವರಣೆ ಇದೆ. ಇದರ ಮೂಲ ಕರ್ತೃ ಅರಿಹಂತ ಭಗವಾನರು. ಅನಂತರ ಗಣಧರರು, ಮುಂದೆ ಆಚಾರ್ಯರೂ, ಪಂಡಿತರೂ, ವಿದ್ವಾಂಸರೂ, ಶಾಸ್ತ್ರಿಗಳೂ, ಕವಿಗಳೂ ಜೈನಧರ್ಮವನ್ನು ತಮ್ಮ ತಮ್ಮ ಕೃತಿಗಳಲ್ಲಿ ವರ್ಣನೆ ಮಾಡಿದ್ದಾರೆ. ಇವೆಲ್ಲಾ ಹಲವಾರು ಭಾಷೆಗಳಲ್ಲಿವೆ.

ಇಂತಹ ಹಲವಾರು ಗ್ರಂಥಗಳನ್ನು ನಾನು ಸಂಗ್ರಹ ಮಾಡಿದ್ದೆ. ನಿರಂತರ ಸ್ವಾಧ್ಯಾಯ ಮಾಡುತ್ತಾ ಬಂದೆ. ಬಿಡುವಿನ ವೇಳೆಯಲ್ಲಿ ಸ್ವಾಧ್ಯಾಯ ಮಾಡಿದ ಗ್ರಂಥಗಳ ಸಾರಾಂಶವನ್ನು ಲೇಖನ, ಪ್ರಬಂಧಗಳ ರೂಪದಲ್ಲಿ ಬರೆದಿಡುತ್ತಾ ಬಂದೆ. ಗ್ರಂಥಗಳ ಒಂದೊಂದು ವಿಷಯಗಳನ್ನು ಆರಿಸಿಕೊಂಡು ಲೇಖನಗಳನ್ನಾಗಿ ಬರೆಯುತ್ತಾ ಬಂದೆ. ಇವುಗಳೆಲ್ಲಾ ಪ್ರಸಿದ್ಧ ಜೈನ ಪತ್ರಿಕೆಗಳಾದ ವಿಶ್ವಬಂಧು, ವಿವೇಕಾಭ್ಯುದಯ, ಗುರುದೇವ, ಸನ್ಮತಿ, ಜಿನವಾಣಿ ಮುಂತಾದವುಗಳಲ್ಲಿ ಆಗಾಗ ಪ್ರಕಟವಾಗಿವೆ. ಮತ್ತು ಹಲವಾರು ಸಂದರ್ಭದಲ್ಲಿ ಪ್ರಕಟವಾದ ವಿಶೇಷ ಸಂಚಿಕೆಗಳಲ್ಲಿ ಸ್ಮರಣ ಸಂಚಿಕೆಗಳಲ್ಲಿ ಪ್ರಕಟವಾಗಿವೆ.

ಅವುಗಳನ್ನೆಲ್ಲಾ ಒಂದು ಕಡೆ ಸಂಗ್ರಹಿಸಿದ್ದೆನು.

ಇವು ಒಂದೊಂದೂ ಧಾರ್ಮಿಕ ವಿಷಯವನ್ನು ತಿಳಿಸುವ ಪ್ರಬಂಧ ರೂಪದಲ್ಲಿವೆ. ಧಾರ್ಮಿಕ ಉಪನ್ಯಾಸ, ಭಾಷಣ ಮಾಡಲೂ ಇವು ಅನುಕೂಲವಾಗಿವೆ. ಕೆಲವು ಲೇಖನಗಳಲ್ಲಿ ಕೆಲವು ವಾಕ್ಯಗಳೂ, ಶಬ್ದಗಳೂ, ಪುನರಾವರ್ತನೆಯಾಗಿರಬಹುದು. ಅವು ಅಲ್ಲಲ್ಲಿಗೆ ಸಂದರ್ಭೋಚಿತವಾಗಿವೆ. ಇವೆಲ್ಲಾ ಪ್ರತಿಯೊಂದೂ ಪ್ರತ್ಯೇಕವಾದ ವಿಷಯಗಳೇ ಆಗಿವೆ. ಇವೆಲ್ಲಾ ಧರ್ಮಗ್ರಂಥಗಳ ಆಳವಾದ ಅಧ್ಯಯನ, ಸ್ವಾಧ್ಯಾಯದ ಫಲವಾಗಿದೆ.

ಒಮ್ಮೆ ಸನ್ಮಾನ್ಯ ಶ್ರೀ ಅ.ನಾ. ಚಂದ್ರಕೀರ್ತಿಯವರು ನಮ್ಮ ಮನೆಗೆ ಬಂದಾಗ ನಾನು ಬರೆದಿಟ್ಟಿರುವ ಹಲವಾರು ಗ್ರಂಥ, ಲೇಖನಗಳನ್ನು ನೋಡಿ ಅಚ್ಚರಿ ವ್ಯಕ್ತಪಡಿಸಿದರು. ಅವುಗಳಲ್ಲಿ ಈ ನನ್ನ ಲೇಖನಗಳ ಸಂಗ್ರಹವನ್ನು ನೋಡಿ ಇವುಗಳಲ್ಲಿ ಕೆಲವನ್ನು ಆಯ್ದು ಒಂದು ಗ್ರಂಥರೂಪದಲ್ಲಿ ಪ್ರಕಟಿಸೋಣವೆಂದರು. ಆ ಸಂದರ್ಭದಲ್ಲಿದ್ದ ನನ್ನ ಆಪ್ತ ಮಿತ್ರರಾದ ಶ್ರೀ ಪಿ.ಎ. ರವಿಕೀರ್ತಿಯವರೂ ಶ್ರೀ ಭೂಪಾಳಂ ಕೆ.ಎನ್. ಸತ್ಯನಾರಾಯಣ ಶೆಟ್ರು ಪ್ರೋತ್ಸಾಹ ನೀಡಿ ಈ ಗ್ರಂಥ ಪ್ರಕಟಣೆಗೆ ಧನ ಸಹಾಯ ಮಾಡುವುದಾಗಿ ಹೇಳಿದರು. ಇದರಿಂದ ಉತ್ತೇಜಿತರಾದ ಶ್ರೀ ಅ.ನಾ. ಚಂದ್ರಕೀರ್ತಿಯವರು ದಾನಿಗಳಿಂದ ಬಂದ ಹಣದೊಂದಿಗೆ ಈ ಗ್ರಂಥಕ್ಕೆ ಆಗುವ ಮಿಕ್ಕ ವೆಚ್ಚವನ್ನು ನಾನು ಭರಿಸುತ್ತೇನೆಂದು ಹೇಳಿದರು. ಅದರಂತೆ ಬಹಳಷ್ಟು ಲೇಖನಗಳಲ್ಲಿ ಕೆಲವನ್ನು ಆಯ್ದು ಈ ಗ್ರಂಥವನ್ನು ಪ್ರಕಟಿಸಲಾಗಿದೆ.

ಇವೆಲ್ಲಾ ಧಾರ್ಮಿಕ ವಿಷಯವನ್ನೇ ಪ್ರತಿಪಾದಿಸುವುದರಿಂದ ಈ ಗ್ರಂಥಕ್ಕೆ "ಸದ್ಧರ್ಮಾಮೃತ" ಎಂಬ ಹೆಸರಿಡಲಾಯಿತು. ಇದನ್ನು ತಮ್ಮ ರತ್ನತ್ರಯ ಗ್ರಂಥ ಪ್ರಕಾಶನದ ಮೂಲಕ ಶ್ರೀಮತಿ ಜಯಪದ್ಮ, ಶ್ರೀ ಅ.ನಾ. ಚಂದ್ರಕೀರ್ತಿಯವರು ಪ್ರಕಟಿಸಿ ಪ್ರೋತ್ಸಾಹಿದ್ದಾರೆ. ಇವರು ಧರ್ಮಾತ್ಮರೂ, ಆದರ್ಶ ದಂಪತಿಗಳೂ, ಜಿನವಾಣಿ ಪ್ರಸಾರಕರು, ಉತ್ತಮ ಸಮಾಜ ಸೇವಾತತ್ಪರರೂ, ಹೆಸರಾಂತ ವ್ಯಕ್ತಿಗಳೂ ಆಗಿದ್ದಾರೆ.

ಇವರು ಈಗಾಗಲೇ ನನ್ನ ಹಲವಾರು ಗ್ರಂಥಗಳನ್ನು ಪ್ರಕಟಿಸಿ ಪ್ರೋತ್ಸಾಹ ನೀಡಿದ್ದಾರೆ. ಈ ಧರ್ಮಾತ್ಮರಿಗೆ ನಾನು ಆಭಾರಿಯಾಗಿದ್ದೇನೆ.

ನನ್ನ ಮತ್ತು ಈ ಗ್ರಂಥದ ಪ್ರಕಾಶಕರ ಪ್ರಾರ್ಥನೆಯನ್ನು ಮನ್ನಿಸಿ ಶ್ರೀಕ್ಷೇತ್ರ ಮೂಡುಬಿದ್ರಿಯ ಜೈನಮಠದ ಭಟ್ಟಾರಕ ಪಟ್ಟಾಚಾರ್ಯ ವರ್ಯರಾದ ಪರಮಪೂಜ್ಯ ಸ್ವಸ್ತಿಶ್ರೀ ಶ್ರೀ ಚಾರುಕೀರ್ತಿ ಪಂಡಿತಾಚಾರ್ಯ ಮಹಾಸ್ವಾಮೀಜಿ ಅವರು ಕೃಪೆ ಇಟ್ಟು ಈ ಗ್ರಂಥಕ್ಕೆ ತಮ್ಮ ಅಮೂಲ್ಯವಾದ "ಶುಭ ಸಂದೇಶ" ವನ್ನು ದಯಪಾಲಿಸಿ ಆಶೀರ್ವದಿಸಿದ್ದಾರೆ.

ಪೂಜ್ಯರ ಶ್ರೀ ಚರಣಂಗಳಿಗೆ ನಾವು ಅನನ್ಯ ಭಕ್ತಿಪೂರ್ವಕವಾಗಿ ಅನಂತಾನಂತ ನಮೋಸ್ತುಗಳನ್ನು ಸಮರ್ಪಿಸುತ್ತೇವೆ.

ಈ ಗ್ರಂಥ ಪ್ರಕಾಶನಗೊಳ್ಳಲು ನನ್ನ ಮಿತ್ರರಾದ ಶ್ರೀ ಪಿ.ಎ. ರವಿಕೀರ್ತಿಯವರು ಮುಖ್ಯ ಕಾರಣರು. ಇವರು ತಮ್ಮ ಛಾರಿಟಬಲ್ ಟ್ರಸ್ಟ್‌ನಿಂದ ಹೆಚ್ಚಿನ ರೀತಿಯ ಧನ ಸಹಾಯ ಮಾಡಿದ್ದಾರೆ. ಹಾಗೂ ನನ್ನ ಮಿತ್ರರಾದ ಶ್ರೀ ಕೆ. ಎಸ್. ಸತ್ಯನಾರಾಯಣ ಶೆಟ್ಟರು ಪ್ರೋತ್ಸಾಹ ನೀಡಿದ್ದಾರೆ. ಹಾಗೂ ಈ ಗ್ರಂಥ ಪ್ರಕಟಣೆಗೆ ಹಲವಾರು ಧರ್ಮ ಬಂಧುಗಳು, ದಾನಿಗಳು ಧನಸಹಾಯ ನೀಡಿ ಪ್ರೋತ್ಸಾಹ ನೀಡಿದ್ದಾರೆ. ಇವರೆಲ್ಲರಿಗೂ ನಾನು ಆಭಾರಿಯಾಗಿದ್ದೇನೆ.

ಈ ಗ್ರಂಥಗಳನ್ನು ತಪ್ಪಿಲ್ಲದೆ ಅಂದವಾಗಿ ಮುದ್ರಣ ಮಾಡಿಕೊಟ್ಟ ಸನ್ಮತಿ ಪ್ರಿಂಟರ್ಸ್, ಎಂ.ಜಿ. ರಸ್ತೆ, ತುಮಕೂರು ಇವರಿಗೆ ಹಾರ್ದಿಕ ಧನ್ಯವಾದಗಳು.

ಇದನ್ನು ಪಡೆದ ಸಹೃದಯರಾದ ಬಂಧುಗಳು ಒಮ್ಮೆಯಾದರೂ ಓದಿದರೆ, ನನ್ನ ಶ್ರಮೆ ಸಾರ್ಥಕವಾಗುವುದೆಂದು ಭಾವಿಸುತ್ತೇನೆ.

ಇತಿ

**ಸಿ. ರಾಮಚಂದ್ರ ಸ್ಯಾದ್ವಾದಿ**

ತುಮಕೂರು

## ಪ್ರಕಾಶಕೀಯ

ಪ್ರಸಿದ್ಧ ಜೈನ ಧರ್ಮ ವಿದ್ವಾಂಸರಾದ ಸಿ. ರಾಮಚಂದ್ರ ಸ್ಯಾದ್ವಾದಿಯವರು ಜೈನ ಜನಾಂಗದಲ್ಲಿ, ಜೈನ ಸಾರಸ್ವತ ಲೋಕದಲ್ಲಿ ಚಿರಪರಿಚಿತರಾಗಿದ್ದಾರೆ. ಉತ್ತಮ ಸಾಹಿತಿಗಳೂ, ಪ್ರವಚನಕಾರರೂ ನಿಷ್ಠಾವಂತ ಆಚಾರಶೀಲರೂ ಹಲವು ಪದವಿ, ಸನ್ಮಾನಗಳಿಂದ ಅಲಂಕೃತರೂ ಆಗಿದ್ದಾರೆ. ಸದಾ ಸ್ವಾಧ್ಯಾಯ ಪ್ರಿಯರಾಗಿದ್ದಾರೆ.

ಇವರು ಹಲವಾರು ಕಥೆ, ಕವನ, ಲೇಖನ, ಲಾವಣಿ, ಭಜನೆ, ಪ್ರಬಂಧ, ನಾಟಕ, ನೀಳ್ಗವನ, ಮುಕ್ತಕ, ಅನುವಾದಗಳನ್ನು ಬರೆದಿದ್ದಾರೆ. ಇವುಗಳಲ್ಲಿ ಹಲವಾರು ಕೃತಿಗಳು ಪ್ರಕಟವಾಗಿವೆ. ಅವೆಲ್ಲಾ ಜನಮೆಚ್ಚುಗೆಯನ್ನು ಗಳಿಸಿವೆ. ಬೃಹದ್ ಗ್ರಂಥಗಳ ಸಾರರೂಪವಾದ ಇವರ ಲೇಖನಗಳು ಸರಳಶೈಲಿಯಲ್ಲಿವೆ. ಇವರ ಈ ಲೇಖನ ಸಂಗ್ರಹವನ್ನು ನೋಡಿದ ನಾನು ಇವುಗಳಲ್ಲಿ ಕೆಲವನ್ನು ಆಯ್ದು ಪ್ರಕಟಿಸೋಣವೆಂದೆನು. ಅದರಂತೆ ಧಾರ್ಮಿಕ ಲೇಖನಗಳ ಸಂಗ್ರಹರೂಪವಾದ ಸದ್ಧರ್ಮಾಮೃತವೆಂಬ ಈ ಗ್ರಂಥವನ್ನು ಸಹರ್ಷದಿಂದ ನಮ್ಮ ರತ್ನತ್ರಯ ಪ್ರಕಾಶನದಿಂದ ಪ್ರಕಟಿಸಿದ್ದೇವೆ. ಇದನ್ನು ಈ ರೀತಿ ಪ್ರಕಟಿಸಲು ಅನುಮತಿ ನೀಡಿ, ಪ್ರೂಫ್ ತಿದ್ದುವಿಕೆಯ ಶ್ರಮೆಯನ್ನು ತಾವೇ ವಹಿಸಿಕೊಂಡು ನಿಃಸ್ವಾರ್ಥವಾದ ರೀತಿಯಲ್ಲಿ ಸೇವೆಯನ್ನು ಮಾಡುತ್ತಿರುವ ಶ್ರೀ ಸ್ಯಾದ್ವಾದಿಯವರಿಗೆ ಹಾರ್ದಿಕ ಧನ್ಯವಾದಗಳು.

ಈ ಲೇಖನಗಳೆಲ್ಲಾ ಸ್ವಾಧ್ಯಾಯದ ಫಲಾಮೃತವಾಗಿದೆ. ಇವುಗಳ ಸ್ವಾಧ್ಯಾಯ ದಿಂದ ಧಾರ್ಮಿಕ ಜ್ಞಾನ ಪ್ರಾಪ್ತವಾಗುವುದು. ಇದು ನಿಜಕ್ಕೂ ಸದ್ಧರ್ಮಾಮೃತವೇ ಆಗಿದೆ.

ಇವರ ಕೃತಿಗಳು ಇನ್ನೂ ಹಲವಾರು ಇವೆ. ಇವೆಲ್ಲಾ ಪ್ರಕಟವಾಗಿ ಜನರ ಕೈ ಸೇರಿ ಸದ್ಧರ್ಮದ ಪ್ರಸಾರವಾಗಲೆಂದು ಹಾರೈಸುತ್ತೇನೆ.

ನಮ್ಮ ಪ್ರಾರ್ಥನೆಯನ್ನು ಮನ್ನಿಸಿ ಮೂಡುಬಿದ್ರಿಯ ಶ್ರೀ ಜೈನಮಠದ ಭಟ್ಟಾರಕರಾದ ಸ್ವಸ್ತಿಶ್ರೀ ಶ್ರೀ ಚಾರುಕೀರ್ತಿ ಪಂಡಿತಾಚಾರ್ಯ ವರ್ಯ ಮಹಾಸ್ವಾಮೀಜಿ ಅವರು ಈ ಗ್ರಂಥ ಪ್ರಕಾಶನಕ್ಕೆ ಶುಭ ಕೋರಿ ಸಂದೇಶವನ್ನು ದಯಪಾಲಿಸಿ ಪ್ರೋತ್ಸಾಹಿಸಿದ್ದಾರೆ. ಪೂಜ್ಯರ ಶ್ರೀ ಚರಣಂಗಳಿಗೆ ಅನಂತಾನಂತ ಪರಿಣಾಮಗಳನ್ನು ಅರ್ಪಿಸುತ್ತೇನೆ.

ಈ ಗ್ರಂಥ ಪ್ರಕಟಣೆಗೆ ಹೆಚ್ಚಿನ ರೀತಿಯಲ್ಲಿ ಉದಾರವಾಗಿ ಧನ ಸಹಾಯ ಮಾಡಿದ ಧರ್ಮಾತ್ಮರಾದ ಶ್ರೀ ಪಿ.ಎ. ರವಿಕೀರ್ತಿಯವರಿಗೂ ಮತ್ತೆಲ್ಲಾ ಧರ್ಮಾತ್ಮರಾದ ದಾನಿಗಳಿಗೂ ನಾನು ಆಭಾರಿಯಾಗಿದ್ದೇನೆ.

ಈ ಗ್ರಂಥವನ್ನು ಅಂದವಾಗಿ ತಪ್ಪಿಲ್ಲದಂತೆ ಮುದ್ರಿಸಿಕೊಟ್ಟ ತುಮಕೂರಿನ ಸನ್ಮತಿ ಪ್ರಿಂಟರ್ಸ್ ಮಾಲೀಕರಿಗೆ ಹಾರ್ದಿಕ ಧನ್ಯವಾದಗಳು.

ಇತೀ,

**ಅ.ನಾ. ಚಂದ್ರಕೀರ್ತಿ**

ಮೈಸೂರು

ಓಂ

ಣಮೋ ಅರಿಹಂತಾಣಂ

ಣಮೋ ಸಿದ್ಧಾಣಂ

ಣಮೋ ಅಇರಿಯಾಣಂ

ಣಮೋ ಉವಜ್ಝಾಯಾಣಂ

ಣಮೋ ಲೋಏಸವ್ವಸಾಹೂಣಂ

ಏಸೋ ಪಂಚಣಮೋಕ್ಕಾರೋ

ಸವ್ವಪಾಪಪಣಾಸಣೋ

ಮಂಗಲಾಣಂಚ ಸವ್ವೇಸಿಂ

ಪಢಮಮಹವಇ ಮಂಗಲಂ ॥

# ಸದ್ಧರ್ಮಾಮೃತ

## ವಿಷಯಾನುಕ್ರಮಣಿಕೆ


| | ವಿಷಯ | ಪುಟಸಂಖ್ಯೆ |
|---|---|---|
| | ಮುನ್ನುಡಿ | |
| | ಪ್ರಕಾಶಕೀಯ | |
| 1. | ಜೈನಧರ್ಮ | 1 |
| 2. | ಪ್ರಾರ್ಥವಿಧಿ | 5 |
| 3. | ಗೃಹಸ್ಥರ ಷಟ್‌ಕ್ರಿಯೆಗಳು | 6 |
| 4. | ಅಷ್ಟಮೂಲ ಗುಣಗಳು | 9 |
| 5. | ಪಂಚಕಲ್ಯಾಣಗಳು | 14 |
| 6. | ಜೈನಧರ್ಮ ವಿಶೇಷತೆಗಳು | 19 |
| 7. | ಜೈನಧರ್ಮದ ಆದರ್ಶ ಮತ್ತು ಪ್ರಾಚೀನತೆ | 26 |
| 8. | ಮುಕ್ತಿಮಂದಿರದ ಮೊದಲ ಮೆಟ್ಟಲು | 34 |
| 9. | ದೇವದರ್ಶನ | 44 |
| 10. | ಜಿನೇಂದ್ರ ಭಕ್ತಿ | 50 |
| 11. | ಜಿನ ಪೂಜಾ ವಿಚಾರ | 57 |
| 12. | ಮಾನವ ಜೀವನದಲ್ಲಿ ಧರ್ಮದ ಮಹತ್ವ | 64 |
| 13. | ಅನೇಕಾಂತ ಮಣಿದರ್ಪಣ | 71 |
| 14. | ಕರ್ಮ ಸಿದ್ಧಾಂತ | 76 |
| 15. | ಷಡ್ದ್ರವ್ಯ ಸಿದ್ಧಾಂತ | 85 |
| 16. | ಶ್ರಾವಕಧರ್ಮದಲ್ಲಿ ಪಂಚಾಣು ವ್ರತಗಳು | 94 |
| 17. | ವೀರವಾಣಿ ಜಯಂತಿ | 99 |
| 18. | ಧರ್ಮಪರಿಭಾಷೆ | 104 |
| 19. | ಧರ್ಮದ ನೆಲೆ ಬೆಲೆ | 108 |

| | ವಿಷಯ | ಪುಟಸಂಖ್ಯೆ |
|---|---|---|
| 20. | ಆತ್ಮನೂ ಪರಮಾತ್ಮನೂ | 112 |
| 21. | ಯಾರ ಭಕ್ತಿ ಶ್ರೇಷ್ಠ | 115 |
| 22. | ಯೋಗ್ಯತ್ವೈವಕಾರಣಂ | 117 |
| 23. | ಸಮವಸರಣ | 123 |
| 24. | ಭಗವಾನ್ ಕುಂದಕುಂದಾಚಾರ್ಯರು | 129 |
| 25. | ಷಟ್‌ಖಂಡಾಗಮ ಸಿದ್ಧಾಂತ ಶಾಸ್ತ್ರ | 133 |
| 26. | ವಿಚಾರಶಕ್ತಿಯ ವಿರಾಟ್ ಸ್ವರೂಪ | 141 |
| 27. | ದೀಪಾವಳಿಯು ಒಂದು ಆಧ್ಯಾತ್ಮಿಕ ಪರ್ವ | 146 |
| 28. | ಭಗವತ್ಪ್ರಾರ್ಥನೆ | 150 |
| 29. | ಆತ್ಮವಿಕಾಸಕ್ಕೆ ಸಂಸ್ಕಾರ ಅಗತ್ಯ | 151 |
| 30. | ಅಹಿಂಸಾಧರ್ಮ | 154 |
| 31. | ಯಜ್ಞೋಪವೀತ | 157 |
| 32. | ಅಷ್ಟಾಹ್ನಿಕಪರ್ವ | 162 |
| 33. | ತುಮಕೂರು ಜಿಲ್ಲಾ ಜಿನಮಂದಿರಗಳು | 165 |
| 34. | ಯಾರ ಕೈ ಸುಂದರ | 169 |
| 35. | ಬ್ರಹ್ಮಚಾರಿ ದಂಪತಿಗಳು | 172 |
| 36. | ಮಂದಾಲಸೆಯ ಜೋಗುಳ ಹಾಡು | 177 |
| 37. | ಸುಖಜೀವನಕ್ಕೆ ನವಸೂತ್ರಗಳು | 181 |
| 38. | ಸ್ವಾಧ್ಯಾಯ | 186 |
| 39. | ನಿಜ ಸುಖದಾಯೀ ದಶಧರ್ಮ | 197 |
| 40. | ಕರ್ನಾಟಕದ ಏಳಿಗೆಗೆ ಜೈನಧರ್ಮದ ಕೊಡಿಗೆ | 205 |
| 41. | ತೀರ್ಥೇಶನ ಸನ್ನಿಧಿ | 208 |
| 42. | ಕೋಪಿ ಅರೆಹುಚ್ಚ | 213 |

| | ವಿಷಯ | ಪುಟಸಂಖ್ಯೆ |
|---|---|---|
| 43. | ಅಭಿನವ ವಾಗ್ದೇವಿ ಕಂತಿ | 222 |
| 44. | ಸುಲಭವಾಗಿ ಅರ್ಥವಾಗುವಂತಹ ಸರಳ ಕನ್ನಡದಲ್ಲಿ ಜೈನಸಾಹಿತ್ಯದ ರಚನೆಯ ಅವಶ್ಯಕತೆ | 231 |
| 45. | ಆಚಾರ ವಿಚಾರ ಪ್ರಚಾರ | 240 |
| 46. | ಏಕಾಗ್ರತೆ | 247 |
| 47. | ವ್ರತವೇ ಆತ್ಮ ವಿಜಯದ ಸಾಧನೆ | 254 |
| 48. | ಪರಂಜ್ಯೋತಿ | 260 |
| 49. | ಜೈನದರ್ಶನದ ಜೀವಾಳ ಅನೇಕಾಂತ | 267 |
| 50. | ಶ್ರುತಪಂಚಮಿ | 272 |
| 51. | ಸಿದ್ಧಸ್ಥಾನ ವರ್ಣನೆ | 275 |
| 52. | ಇದು ಟೀಕೆಯಲ್ಲ ಎಚ್ಚರಿಕೆ | 283 |
| 53. | ಆತ್ಮಧರ್ಮದರ್ಪಣ | 291 |
| 54. | ದೇವದರ್ಶನ | 297 |
| 55. | ಪ್ರತಿಕ್ರಮಣ ಅಥವಾ ದೋಷಪರಿಹಾರೋಪಾಯ | 300 |
| 56. | ಅಪಧ್ಯಾನದ ಅನಾಹುತ | 309 |
| 57. | ಶ್ರೀ ವೃಷಭನಾಥ ತೀರ್ಥಂಕರರು | 315 |
| 58. | ಭರತ ಚಕ್ರಿಯ ಸುಖದುಃಖ ಸಮೀಕ್ಷೆ | 325 |
| 59. | ಶ್ರೀ ಚಂದ್ರಪ್ರಭಸ್ವಾಮಿಯ ಸಂಕ್ಷಿಪ್ತ ಪುರಾಣ | 332 |
| 60. | ಶ್ರೀ ಶಾಂತಿನಾಥ ಚರಿತ್ರೆ | 336 |
| 61. | ಶ್ರೀ ಪಾರ್ಶ್ವನಾಥ ಚರಿತ್ರೆ | 340 |
| 62. | ಭಗವಾನ್ ಮಹಾವೀರರ ಜೀವನದರ್ಶನ | 352 |
| 63. | ಲಬ್ಧಿ ವಿಧಾನ ವ್ರತ ಮಹಿಮೆ | 361 |
| 64. | ಶ್ರೀ ಶುಭಚಂದ್ರ ಚರಿತ್ರೆ | 365 |
| 65. | ಸುಖಸನ್ನಿಧಿಯ ಸೋಪಾನಗಳು | 371 |

| | ವಿಷಯ | ಪುಟಸಂಖ್ಯೆ |
|---|---|---|
| 66. | ಶಾಸನದೇವತೆಗಳನ್ನು ಪೂಜಿಸಬಹುದೋ? | 379 |
| 67. | ಧ್ಯಾನವಿಚಾರ | 391 |
| 68. | ಶ್ರೀ ಪಂಚಪರಮೇಷ್ಠಿಗಳು | 405 |
| 69. | ಸರ್ವೋದಯ ಧರ್ಮತೀರ್ಥ | 416 |
| 70. | ನಾಲ್ಕು ಅನುಯೋಗಗಳು | 426 |
| 71. | ಮೋಕ್ಷಮಾರ್ಗ | 429 |
| 72. | ತ್ರಿಲೋಕ ವಿಚಾರ | 439 |
| 73. | ನೋಂಪಿಗಳು | 451 |
| 74. | ಒಂದು ಅಪೂರ್ವ ಸಂವಾದ | 456 |
| 75. | ಆತ್ಮಶುದ್ಧಿಯ ಸಾಧನ ಸಾಮಾಯಿಕ | 459 |
| 76. | ಶ್ರಾವಕರ ಆತ್ಮೋನ್ನತಿಯ ಅಂತಸ್ತುಗಳು | 465 |
| 77. | ಧರ್ಮದ ಹಣದ ದುರುಪಯೋಗದ ದುಷ್ಫಲ | 470 |
| 78. | ಇಂದು ನಮಗೆ ಎಂತಹ ವಿದ್ಯೆ ಬೇಕು? | 474 |
| 79. | ನೈತಿಕ ಶಿಕ್ಷಣದ ಅವಶ್ಯಕತೆ | 477 |
| 80. | ಭವಾವಳೀ ತತ್ತ್ವ | 482 |
| 81. | ಸಲ್ಲೇಖನವು ಸಾಧಕನ ಸಾರ್ಥಕತೆ | 488 |
| 82. | ಜೈನ ಸ್ತೋತ್ರ ಸಾಹಿತ್ಯ | 494 |
| 83. | ಗುಣಸ್ಥಾನ ವಿವೇಚನೆ | 503 |
| 84. | ಶ್ರೀ ಗಣೇಶ ಪ್ರಸಾದಜೀ ವರ್ಣಿಜೀ | 510 |
| 85. | ತೀರ್ಥಯಾತ್ರೆ | 515 |